ಅಧ್ಯಕ್ಷರು : ಇವರೇನೂ ಅಲ್ಲವಾ?

ಶ್ರೀ ಜಿ.ಬಿ. ಶಿವಕುಮಾರ್ : ಇವರು ಲಕ್ಷ್ಮಣಯ್ಯ ಅಲ್ಲ, ಲಕ್ಷ್ಮಯ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಲಕ್ಷ್ಮಣ್ಣಯ್ಯನವರು ಇಡೀ ರಾಜ್ಯಕ್ಕೆ ಕೊಡುಗೆಯಾಗಿ ಕೊಟ್ಟರೆ ಇವರು ಜನತಾದಳಕ್ಕೆ ಕೊಡುಗೆ ಕೊಟ್ಟಿದ್ದಾರೆ.

ಮಾನ್ಯ ಸದಸ್ಯರು : ಲಕ್ಷ್ಮಯ್ಯನವರು ಕಳೆದ ಮೂರು ಸಾಲಿನಿಂದಲೂ ಸೇವೆ ಸಲ್ಲಿಸುತ್ತಿದ್ದಾರೆ. ಇವರದ್ದು ಏನೂ ಸೇವೆ ಅಲ್ಲವೆಂದು ಹೇಳುತ್ತಿದ್ದೀರಲ್ಲಾ?

ಶ್ರೀ ಸಿ. ಬೈರೇಗೌಡ : ಇದೇ ರೀತಿಯಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಹ.....

ಅಧ್ಯಕ್ಷರು : ಇನ್ನೆಷ್ಟು ಟೈಮ್ ನಿಮಗೆ ಬೇಕಾಗುತ್ತದೆ? ಎಷ್ಟು ಸಮಯ ಬೇಕಾಗಬಹುದು?

ಶ್ರೀ ಸಿ. ಬೈರೇಗೌಡ : ಇನ್ನೊಂದು 20-25 ನಿಮಿಷ ಬೇಕಾಗುತ್ತದೆ.

ಅಧ್ಯಕ್ಷರು : ಹೀಗೆ ಮಾಡಿಕೊಳ್ಳೋಣ. ಈಗ 1.45 ಗಂಟೆ ಆಗಿದೆ. ಮಾನ್ಯ ಗೋವಿಂದೇಗೌಡರು ಎರಡನೇ ಪಿ.ಯು.ಸಿ ಮೌಲ್ಯಮಾಪನದ ಶಿಕ್ಷಕರು ಯಾರು ಇದ್ದರು, ಅವರು ಸ್ಟ್ರೈಕ್ ಮಾಡುತ್ತಿದುದನ್ನು ಡಿಸಾಲ್ವ್ ಮಾಡಿದ್ದಾರೆ. ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಬೇಕೆಂದು ಹೇಳುತ್ತಿದ್ದಾರೆ. ಅವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಲಂಚ್‌ಗೆ ಅಡ್ಜರ್ನ್ ಆಗೋಣ. ವಾಪಸ್ಸು ಬಂದಮೇಲೆ 20 ನಿಮಿಷಗಳಲ್ಲಿ ತಾವು ಕಂಕ್ಲೂಡ್ ಮಾಡಿದರೆ ನಂತರ ಮಿನುಗಾರಿಕೆ, ತೋಟಗಾರಿಕೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಈಗ ತಾವು ಸ್ಟೇಟ್‌ಮೆಂಟ್ ಮಾಡಿ.

ಸಚಿವರ ಹೇಳಿಕೆ

ಎರಡನೇ ಪಿ.ಯು.ಸಿ. ಮೌಲ್ಯಮಾಪನ ಮಾಡುವ ಶಿಕ್ಷಕರು ಮುಷ್ಕರ ಹಿಂತೆಗೆದುಕೊಂಡಿರುವ ಬಗ್ಗೆ.

+ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಶಿಕ್ಷಕ ಹಾಗೂ ಶಿಕ್ಷಕೇತರ ಸಂಘದ ನೌಕರರು ಕಳೆದ 10 ದಿನಗಳಿಂದ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಪರೀಕ್ಷಾ ಮೌಲ್ಯ ಮಾಪನವನ್ನು ಬಹಿಷ್ಕರಿಸಿ ನಡೆಸುತ್ತಿದ್ದ ಮುಷ್ಕರವನ್ನು ನಮ್ಮ ಕೋರಿಕೆಯ ಮೇರೆಗೆ ಹಿಂತೆಗೆದುಕೊಂಡಿದ್ದಾರೆ. ಇದಕ್ಕಾಗಿ ನಾನು ಸಂಘದವರನ್ನು ಸರ್ಕಾರದ ಪರವಾಗಿ ಅಭಿನಂದಿಸುತ್ತಿದ್ದೇನೆ.

ಸಂಘವು ಮುಂದಿಟ್ಟಿದ್ದ ಎಲ್ಲಾ ಬೇಡಿಕೆಗಳನ್ನು ಪರಿಶೀಲಿಸಿ ಈ ಕೆಳಕಂಡ ನ್ಯಾಯಯುತವಾದ ಬೇಡಿಕೆಗಳನ್ನು ಕೂಡಲೇ ಜಾರಿಗೆ ಕೊಡಲು ಸರ್ಕಾರ ಒಪ್ಪಿದೆ.

1) ಸರ್ಕಾರದ ಇತರ ನೌಕರರಿಗಿರುವ 10 ಮತ್ತು 15 ವರ್ಷಗಳ ಕಾಲಮಿತಿ ಬಡ್ತಿಯ ಜೊತೆಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಿಗೆ ಬಡ್ತಿ ಅವಕಾಶ ಕಡಿಮೆ ಇರುವುದರಿಂದ ಅವರಿಗೆ 20 ವರ್ಷಗಳ ಕಾಲಮಿತಿ ಬಡ್ತಿಯನ್ನು ನೀಡಲಾಗುವುದು. ಈ ಸೌಲಭ್ಯವನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸಲಾಗುವುದು.

2) ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 750 ಕ್ಕಿಂತ ಮೇಲ್ಪಟ್ಟು ಇದ್ದಲ್ಲಿ ಅಂತಹ ಕಡೆ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗೆ ಸಮನಾದ ಉಪ ಪ್ರಾಂಶುಪಾಲರ ಹುದ್ದೆಯನ್ನು ಸೃಷ್ಟಿಸಲಾಗಿದ್ದು, ಈ ಸೌಲಭ್ಯವನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ವಿಸ್ತರಿಸಲಾಗುವುದು.

3) ವಿದ್ಯಾರ್ಥಿಗಳ ಸಂಖ್ಯೆ 500ಕ್ಕೂ ಮೇಲ್ಪಟ್ಟು ಇರುವ ಪದವಿ ಪೂರ್ವ ಕಾಲೇಜುಗಳಲ್ಲಿ ಈಗ ಇರುವ ಎಫ್‌ಡಿಸಿ ಹುದ್ದೆಯನ್ನು ಸೂಪರಿಟೆಂಡೆಂಟ್ ಹುದ್ದೆಗೆ ಏರಿಸಲಾಗುವುದು.

ಮೇಲ್ಕಂಡ ಬೇಡಿಕೆಗಳ ಹೊರತಾಗಿ ಇನ್ನುಳಿದ ಬೇಡಿಕೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು (ಜೆಸಿಎಂ) ರಚಿಸಲಾಗುವುದು.

ಮೌಲ್ಯ ಮಾಪನವನ್ನು ತ್ವರಿತವಾಗಿ ಮುಗಿಸಿ ಸಕಾಲದಲ್ಲಿ ಫಲಿತಾಂಶವನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು.

ಮೌಲ್ಯಮಾಪನ ಬಹಿಷ್ಕಾರದಿಂದ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಆತಂಕ ಉಂಟಾಗಿದ್ದು ಇನ್ನು ಮುಂದೆ ಇಂತಹ ಕಠಿಣ ಮಾರ್ಗ ಹಿಡಿಯಬಾರದಾಗಿ ನನ್ನ ಎಲ್ಲಾ ಶಿಕ್ಷಕ ಮಿತ್ರರನ್ನು ನಾನು ಕೇಳಿಕೊಳ್ಳುತ್ತಿದ್ದೇನೆ.

ಇಂತಹ ಆತಂಕ ಸಮಯದಲ್ಲಿ ಸರ್ಕಾರವನ್ನು ಬೆಂಬಲಿಸಿದ ಶಾಸಕ ಮಿತ್ರವನ್ನು ಪರಿಹಾರ ಹುಡುಕಲು ಸಹಕರಿಸಿದ ಎಲ್ಲ ಅಧಿಕಾರಿಗಳನ್ನು ನಾನು ಅಭಿನಂದಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇದು ಹೀಗೆ ಆಗುತ್ತದೆ ಎಂದು ತಿಳಿದು ಕೊಂಡೇ ಏಪ್ರಿಲ್ 27 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಾಗ ತಾವು ಹೇಳಿದಿರಿ. 'ಇಲ್ಲ, ಅಂಥಾದ್ದು ಏನೂ ಇಲ್ಲ. ನಾವು ಈಗಾಗಲೇ ಅವರ ಜೊತೆ ಮಾತುಕತೆ ಆಡಿದ್ದೇವೆ. 28ಕ್ಕೆ ಅವರು ಮೌಲ್ಯಮಾಪನ ಮಾಡುವುದಕ್ಕೆ ಹೋಗುತ್ತಾರೆ.' ಎನ್ನತಕ್ಕಂಥಾದ್ದು ಹೇಳಿದಿರಿ. ನಾನು ಏಕೆ ಹೇಳುತ್ತಿದ್ದೇನೆಂದರೆ ಕೊನೆಗೆ ಅವರು ಸ್ಟ್ರೈಕ್ ಮಾಡಿ ಧರಣಿ ಮಾಡಿ ಕೇಳಿಯಾದಮೇಲೆ ನೀವು ಸಾಲ್ವ್ ಮಾಡತಕ್ಕಂಥಾದ್ದು ಹೀಗೆ ಆಗಬಾರದು. ಯಾವಾಗ ನಿಮ್ಮ ನೋಟೀಸ್‌ಗೆ ನಾವು ತರುತ್ತೇವೆ ಎಂದಾಗ ಅದರಲ್ಲಿ ಸ್ವಲ್ಪ ಅರ್ಥ ಇರುತ್ತದೆ ಎಂದು ತಿಳಿದುಕೊಂಡು ತಕ್ಷಣವೇ ಮಾಡಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದನ್ನು ತಮ್ಮ ಗಮನಕ್ಕೆ ತರಬೇಕಾದರೆ ನಾವು ಹದಿನೈದು ದಿವಸಗಳಿಂದ ಇದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ತಾವು ತಂದಿದ್ದು ಒಳ್ಳೆಯದೇ ಆಗಿದೆ, ತಮ್ಮ ಸಹಕಾರ ನಮಗೆ ಸಿಕ್ಕಿದೆ. ಇದರ ಬಗ್ಗೆ ಚಿಂತನೆ ಮಾಡತಕ್ಕಂಥ ವ್ಯವಸ್ಥೆ ನಮಗೆ ಇಲ್ಲದಿದ್ದರೆ ನಾವು ಇಲ್ಲಿ ಏಕೆ ಕುಳಿತುಕೊಳ್ಳಬೇಕು? ಅದರ ಅವಶ್ಯಕತೆ ಇಲ್ಲ. ರಾಜ್ಯದ ಎಲ್ಲಾ ಮಕ್ಕಳ ಹಿತರಕ್ಷಣೆ ಮಾಡತಕ್ಕಂಥ ಕೆಲಸ, ಜವಾಬ್ದಾರಿಯಿಂದ ತಾವು ಮಾಡಿದ್ದೀರಿ; ನಾವೂ ಮಾಡಿದ್ದೇವೆ. ನಮ್ಮೆಲ್ಲರಿಂದಾಗಿ ಇದು ನಡೆದಿರತಕ್ಕಂಥಾದ್ದು. ತಾವು ಹೇಳಿದಮೇಲೆ ನಾವು ಇದನ್ನು ಮಾಡಿದ್ದೇವೆ ಎನ್ನುವುದಲ್ಲ. ತಾವು ಹೇಳಬೇಕಾದುದನ್ನು ಹೇಳಿದ್ದೀರಿ. ನಾವು ಕವಿಯಲ್ಲಿ ಕೇಳಿದ್ದೇನೆ, ಕೃತಿಯಲ್ಲಿ ತಂದಿದ್ದೇನೆ. ಇದಕ್ಕಾಗಿ ನಿಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು : ತಮಗೆ ತುಂಬು ಹೃದಯದ ಅಭಿನಂದನೆಗಳು.

ಶ್ರೀ ಕೆ.ಎಸ್. ಈಶ್ವರಪ್ಪ : ನಾನೂ ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಒಟ್ಟಿನಲ್ಲಿ ಸಮಸ್ಯೆಯನ್ನು ಬಗೆಹರಿಸಿದ ತಮಗೆ ಅಭಿನಂದನೆಗಳು.

ಅಧ್ಯಕ್ಷರು : ಬೈರೇಗೌಡರೇ, ಈಗ ಊಟಕ್ಕೆ ಹೋಗಿ ಬಂದುಬಿಡೋಣ್ವಾ? ಆದರೆ ಬೈರೇಗೌಡರು ತಮ್ಮ ಒಬ್ಬರದು ಪೂರೈಸಿಬಿಡಲಿ ಎಂದು ಮಾನ್ಯ ತಿಮ್ಮಪ್ಪನವರು ಭಾವಿಸುತ್ತಿದ್ದಾರೆ. ಎರಡು ಗಂಟೆಯೊಳಗೆ ಮುಗಿಯಬಹುದಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೂ ಕ್ಲಾರಿಫಿಕೇಷನ್ ಆಗಬೇಕು. ನಮಗೆ ಹೊಟ್ಟೆ ಹಸಿಯುತ್ತಾ ಇದೆ.

ಅಧ್ಯಕ್ಷರು : ಹಾಗಾದರೆ ಈಗ ಅಡ್ಜರ್ನ್ ಮಾಡೋಣ. ವಿರೋಧಪಕ್ಷದ ನಾಯಕರು ಹಸಿವು ಎಂದು ಹೇಳುತ್ತಿದ್ದಾರೆ. ಈಗ ಸದನವನ್ನು ಮುಂದೂಡಿ ಪುನಃ 3 ಗಂಟೆಗೆ ನಾವು ಸಮಾವೇಶಗೊಳ್ಳುತ್ತೇವೆ.

(ಸದನವು 1- 46 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3 -20 ಗಂಟೆಗೆ ಪುನಃ ಸಮಾವೇಶಗೊಂಡಿತು. ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಮಾಮನಿಯವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೃಷಿ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ (ಮುಂದುವರಿದ ಉತ್ತರ)

+ ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಆಗ ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುತ್ತಿದ್ದೆ. ಧಾರವಾಡದ ಕೃಷಿ ವಿಶ್ವವಿದ್ಯಾನಿಲಯ ಈ ರಾಜ್ಯದ ಕೃಷಿಗೆ ಮಹತ್ತರವಾದ ಕೊಡುಗೆಯನ್ನು ನೀಡಿದೆ. ಅಲ್ಲಿನ ವಿಜ್ಞಾನಿಗಳಾಗಿರತಕ್ಕಂಥವರು ಬಹಳ ಶ್ರದ್ಧೆ [illegible] ಕರ್ತವ್ಯವನ್ನು ಮಾಡಿರುವ ಕಾರಣದಿಂದ ಆ ಭಾಗದ ರೈತರಿಗೆ ಮಹತ್ತರವಾದಂಥ